ಇ) ಇದರಿಂದ ಎರಡನೇ ಪಿ.ಯು.ಸಿ. ವಿದ್ಯಾರ್ಥಿಗಳ ಪರೀಕ್ಷೆಗೆ ತೊಂದರೆಯಾಗಿಲ್ಲವೆ ?

ಈ) ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

ಅ) ಬಂದಿದೆ.

ಆ) ಸುಮಾರು ೬ ತಿಂಗಳಿಂದ ಖಾಲಿ ಇವೆ.

ಇ) ಈ) ಹೌದು. ಆದ್ದರಿಂದ ಈಗಾಗಲೇ ಖಾಲಿ ಇದ್ದ ಭೌತ ಶಾಸ್ತ್ರ ಉಪನ್ಯಾಸಕರ ಹುದ್ದೆ ಬಿಟ್ಟು ಉಳಿದ ಖಾಲಿ ಇದ್ದ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ. ಭೌತ ಶಾಸ್ತ್ರದ ಹುದ್ದೆಗೂ ಅರೆಕಾಲಿಕ ಶಿಕ್ಷಕರನ್ನು ನೇಮಿಸಲು ಆದೇಶ ನೀಡಲಾಗಿದೆ.

ಮಾನ್ಯ ಸದಸ್ಯರು ಹಾಜರಿರಲಿಲ್ಲ.

ಧಾರವಾಡದಲ್ಲಿ ಶೈತ್ಯಾಗಾರವನ್ನು ನಿರ್ಮಿಸಂವ ವಿಚಾರ

೪೨೯ (೧೨೨೬) ಶ್ರೀ ಸಿ. ವಿ. ಪುಡಕಲಕಟ್ಟಿ (ಧಾರವಾಡ).—ಮಾನ್ಯ ಪಶುಸಂಗೋಪನಾ, ಪಶುವೈದ್ಯ ಹಾಗೂ ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಧಾರವಾಡ ನಗರದಲ್ಲಿ ತೋಟಗಾರಿಕೆ ಇಲಾಖೆಯವರು ಆಲೂಗಡ್ಡೆ, ಈರುಳ್ಳಿ, ಹಣ್ಣು ಹಂಪಲು, ಇತ್ಯಾದಿಗಳನ್ನು ಸುರಕ್ಷಿತವಾಗಿ ಶೇಖರಿಸಲು ಶೈತ್ಯಾಗಾರದ ಕಟ್ಟಡವನ್ನು ಈವರೆಗೂ ಪ್ರಾರಂಭ ಮಾಡದೇ ಇರುವುದರಿಂದ ರೈತರಿಗೆ ತೊಂದರೆಯಾಗಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಆ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್ (ಪಶುಸಂಗೋಪನೆ, ಪಶುವೈದ್ಯ ಸೇವೆ ಮತ್ತು ತೋಟಗಾರಿಕೆ ಸಚಿವರು).—

ಅ) ಹೌದು, ಸ್ವಲ್ಪಮಟ್ಟಿನ ತೊಂದರೆ ಇದೆಯೆಂದು ಕಂಡು ಬಂದಿದೆ.

ಆ) ಶೈತ್ಯಾಗಾರದ ಸಲುವಾಗಿ, ಒಂದು ಎಕರೆ ಜಾಗವನ್ನು ಧಾರವಾಡದ ವ್ಯವಸಾಯೋತ್ಪನ್ನ ಮಾರಾಟ ಸಮಿತಿಯಿಂದ ಕೊಂಡುಕೊಳ್ಳಲಾಗಿದೆ, ಹಾಗೂ ಶೈತ್ಯಾಗಾರದ ನಿರ್ಮಾಣ ಕ್ಕಾಗಿ, ಒಂದು ತಾಂತ್ರಿಕ ವರದಿಯನ್ನು ಸಹ ಕೇಂದ್ರೀಯ ಆಹಾರ ಸಂಶೋಧನ ಸಂಸ್ಥೆ, ಮೈಸೂರು, ಇವರಿಂದ ಪಡೆಯಲಾಗಿದೆ. ಅಂತರರಾಷ್ಟ್ರೀಯ ಅಭಿವೃದ್ಧಿ ನೆರವಿನಿಂದ ಕೈಗೊಳ್ಳಬೇಕೆಂದಿರುವ "ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ" ಯಲ್ಲಿ ಇದನ್ನು ತೆಗೆದುಕೊಳ್ಳುವ ವಿಚಾರ ಪರಿಶೀಲನೆಯಲ್ಲಿದೆ.

ಮಾನ್ಯ ಸದಸ್ಯರು ಹಾಜರಿರಲಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು

SRI A. LAKSHMISAGAR (Minister for Law & Parliamentary, Housing and Public Grievances).—I beg to lay on the table of the House the 30th list of written answers for questions.

MR. SPEAKER.—Answers laid.